ಪ್ರತಿಬಿಂಬ

PRATIBIMBA – Multidisciplinary Kannada Research Journal of IIMRD
ISSN: 2582-2284
Vol-2 Issue 4, JAN-FEB 2021, 120-130

IIMRD JOURNALS
www.iimrd.com

# ಪ್ರಜಾಪ್ರಭುತ್ವ ಮತ್ತು ಸಾಮಾಜಿಕ ನ್ಯಾಯಕ್ಕೆ ಅಂಬೇಡ್ಕರವರ ಕೊಡುಗೆ

ಶ್ರೀಕಾಂತ ಎಸ್.ಟಿ.[1]

**ಪೀಠಿಕೆ**

ಅಂಬೇಡ್ಕರ್‌ರವರು ಭಾರತದ ಮಹಾನ್ ವಿಚಾರವಾದಿ, ಮಾನವೀಯತೆಯ ಹರಿಕಾರ ಮತ್ತು ಶ್ರೇಷ್ಠ ಮುತ್ಸದ್ಧಿ. ಅವರ ಬದುಕು, ಹೋರಾಟ ಮತ್ತು ವಿಚಾರಗಳು ಇಂದಿಗೂ ಕೂಡ ಭಾರತದ ಕೋಟ್ಯಾನುಕೋಟಿ ದಲಿತರು, ಹಿಂದುಳಿದವರು, ಅಲ್ಪ ಸಂಖ್ಯಾತರು, ಮಹಿಳೆಯರು ಮತ್ತಿತರರ ವಂಚಿತ ಜನ ವರ್ಗಗಳಿಗೆ ದಾರಿದೀಪ. ಅಂಬೇಡ್ಕರ್ ಪುರೋಹಿತಶಾಹಿ, ಬಂಡವಾಳಶಾಹಿ, ವಸಾಹಾತುಶಾಹಿ ಮತ್ತಿತರ ಜನವಿರೋಧಿ ಶಕ್ತಿಗಳು ಮತ್ತು ಪ್ರವೃತ್ತಿಗಳ ವಿರುದ್ಧ ಬದುಕಿನುದ್ದಕ್ಕೂ ಹೋರಾಡಿ 'ಸಾಮಾಜಿಕ ನ್ಯಾಯದ ಜ್ಯೋತಿ' ಎಂದು ಜಗದ್ವಿಖ್ಯಾತರಾದರು.

ಪ್ರಜಾಪ್ರಭುತ್ವವು ಮೂಲಭೂತವಾಗಿ ಸಮಾಜದ ಒಂದು ರೂಪ. ಪ್ರಜಾತಂತ್ರ ಸಮಾಜಕ್ಕೆ ಸಮಾನ ಉದ್ದೇಶ, ಸಾರ್ವಜನಿಕ ಗುರಿ ಮತ್ತು ಪರಸ್ಪರ ಸಹಾನುಭೂತಿಗಳನ್ನೊಳಗೊಂಡ ಒಂದು ಒಗ್ಗಟ್ಟು ಇರುವುದು ಅವಶ್ಯಕವೇನಲ್ಲದಿರಬಹುದು. ಆದರೆ ಎರಡು ಸಂಗತಿಗಳನ್ನು ಅದು ನಿಚ್ಚಳವಾಗಿ ಒಳಗೊಂಡಿರುತ್ತದೆ. ಮೊದಲನೆಯದು, ಮನೋಧರ್ಮ, ಸಹಮಾನವರೊಂದಿಗೆ ಗೌರವ, ಸಮಾನತಾ ಭಾವನೆಗಳನ್ನು ಹೊಂದಿರುವುದು. ಎರಡನೆಯದು, ಕಟ್ಟುನಿಟ್ಟಿನ ಸಾಮಾಜಿಕ ಅಡೆತಡೆಗಳಿಂದ ಮುಕ್ತವಾದ ಸಾಮಾಜಿಕ ಸಂಸ್ಥೆ ಇರುವುದು.

ಪ್ರಜಾಪ್ರಭುತ್ವದ ಸಫಲಗೊಳ್ಳಲು ಸಮಾಜದಲ್ಲಿ ತೀವ್ರತರವಾದ ಅಸಮಾನತೆಯಿರಬಾರದು ಮತ್ತು ಯಾವುದೇ ಒಂದು ವರ್ಗಕ್ಕೆ ಮಾತ್ರ ವಿಶೇಷಾಧಿಕಾರವಿರಬಾರದು. ಆಡಳಿತ ಪಕ್ಷದ ಜೊತೆಗೆ ವಿರೋಧ ಪಕ್ಷ ಅಸ್ತಿತ್ವದಲ್ಲಿರಬೇಕು. ಕಾನೂನಿನಲ್ಲಿಯೂ, ಆಡಳಿತದಲ್ಲಿಯೂ ಸರ್ವಸಮಾನತೆ ಇರಬೇಕು, ಸಾಂವಿಧಾನಿಕ ನೈತಿಕತೆಯ ಪಾಲನೆ ಮಾಡಬೇಕು, ಬಹುಸಂಖ್ಯಾತರ ದಬ್ಬಾಳಿಕೆ ಇರಬಾರದು, ಸಮಾಜದಲ್ಲಿ ನೀತಿ ಪ್ರಜ್ಞೆ ಇರಬೇಕು ಮತ್ತು ಸಾರ್ವಜನಿಕ ಪ್ರಾಮಾಣಿಕತೆ ಇರಬೇಕಾದ ಅವಶ್ಯಕತೆಯಿದೆ. ಭ್ರಾತೃತ್ವ, ಪ್ರಜಾಪ್ರಭುತ್ವದ ಇನ್ನೊಂದು ಹೆಸರು. ಪ್ರಜಾಪ್ರಭುತ್ವ ಎಂಬುದು ಕೇವಲ ಒಂದು ರೀತಿಯ ಸರ್ಕಾರ ಎಂದಷ್ಟೇ ಅಲ್ಲ. ಪ್ರಪ್ರಥಮವಾಗಿ ಅದೊಂದು

[1] *ಅತಿಥಿ ಉಪನ್ಯಾಸಕರು (ರಾಜ್ಯಶಾಸ್ತ್ರ), ಬಳ್ಳಾರಿ ತಾಲೂಕು, ಬಳ್ಳಾರಿ ಜಿಲ್ಲೆ.*

ಸಮನ್ವಯ ಜೀವನ ಕ್ರಮ, ಹೊಂದಿ ಬಾಳುವ ಸಂವಹನಾನುಭವ. ಅದು ನಿಜಕ್ಕೂ ಸಹಜೀವಿಗಳಲ್ಲಿರುವ ಪರಸ್ಪರ ಗೌರವ ಪೂರಕ ಧೋರಣೆಯಾಗಿದೆ.

ಪ್ರಜಾಪ್ರಭುತ್ವವನ್ನು ಗಣರಾಜ್ಯ ಅಥವಾ ಸಂಸದೀಯ ಸರ್ಕಾರಕ್ಕೆ ಸಮೀಕರಿಸಲಾಗುವುದಿಲ್ಲ. ಪ್ರಜಾಪ್ರಭುತ್ವದ ಬೇರುಗಳು ಸಂಸದೀಯ ಅಥವಾ ಬೇರಾವುದೇ ರೀತಿಯ ಸರ್ಕಾರದ ರೂಪದಲ್ಲಿಲ್ಲ. ಪ್ರಜಾಪ್ರಭುತ್ವ ಎಂದರೆ ಸಾಂಘಿಕ ಜೀವನದ ಒಂದು ಮಾದರಿ. ಇದರ ಬೇರುಗಳನ್ನು ಸಾಮಾಜಿಕ ಸಂಬಂಧಗಳಲ್ಲಿ, ಸಮಾಜವನ್ನು ರೂಪಿಸುವ ಮನುಷ್ಯರ ಸಂಬಂಧ ಹೊಂದಾಣಿಕೆಗಳಲ್ಲಿ ಹುಡುಕಬೇಕು. ಭಾರತದಂತಹ ಬಹುಆಯಾಮಗಳ ಸಮಾಜದಲ್ಲಿರುವ ಸಾಮಾನ್ಯ ಲಕ್ಷಣವೆಂದರೆ, ಜಾತ್ಯಾತೀತತೆ. ಅದು ನಮ್ಮ ಪ್ರಜಾತಂತ್ರ ಕಟ್ಟಡದ ಒಂದು ಆಧಾರಸ್ತಂಭ. ಅದು ನಮ್ಮ ಸಹ ಜೀವನವನ್ನು ಒಗ್ಗೂಡಿಸುವ ಶಕ್ತಿಯಾಗಿದೆ. ಸಾಮಾಜಿಕ ಮತ್ತು ಆರ್ಥಿಕ ಪ್ರಜಾಪ್ರಭುತ್ವವಿಲ್ಲದೆ ರಾಜಕೀಯ ಪ್ರಜಾಪ್ರಭುತ್ವಕ್ಕೆ ಅರ್ಥವಿಲ್ಲ. ಪ್ರಜಾಪ್ರಭುತ್ವದ ಶರೀರಕ್ಕೆ ಸಾಮಾಜಿಕ ಮತ್ತು ಆರ್ಥಿಕ ಪ್ರಜಾಪ್ರಭುತ್ವ ಅಂಗಾಂಶ, ಮಾಂಸಖಂಡಗಳಿದ್ದ ಹಾಗೆ. ದೇಹದಲ್ಲಿ ಇವು ಗಟ್ಟಿಯಾದಷ್ಟು ದೇಹ ಗಟ್ಟಿಮುಟ್ಟಾಗಿರುತ್ತದೆ.

ಭಾರತೀಯ ಸಮಾಜವು ಸಾವಿರಾರು ವರ್ಷಗಳಿಂದ ಪೋಷಿಸಿಕೊಂಡು ಬಂದ ಜಾತಿ ವ್ಯವಸ್ಥೆಯಿಂದಾಗಿ ಸಮಾಜದಲ್ಲಿ ಆರ್ಥಿಕ, ರಾಜಕೀಯ, ಸಾಮಾಜಿಕ ಮತ್ತು ಧಾರ್ಮಿಕ ಅಸಮಾನತೆಗಳು ನೆಲೆಯೂರಿ ನಿಂತಿವೆ. ಇಂತಹ ಅಸಮಾನತೆಯ ವ್ಯವಸ್ಥೆಯಿಂದಾಗಿ ಸಮಾಜದಲ್ಲಿ ಕೆಲವೇ ಜನರು ಸುಖಿಗಳಾಗಿ, ಬಹುಪಾಲು ಜನರು ನೋವು ಮತ್ತು ಅಪಮಾನಗಳಲ್ಲಿ ಬದುಕಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ. ಜಾತಿ ವ್ಯವಸ್ಥೆ ಎಂಬುದು ಕೇವಲ ಅಸ್ಪೃಶ್ಯರನ್ನು ಮಾತ್ರ ಗುಲಾಮರನ್ನಾಗಿಸುವುದರ ಜೊತೆಗೆ ಭಾರತೀಯರ ಮನಸ್ಸನ್ನು ಅದು ಗುಲಾಮವಾಗಿಸಿದೆ. ಸ್ವಾತಂತ್ರ್ಯ ನಂತರದಲ್ಲಿ ಐವತ್ತೈದು ವರ್ಷಗಳು ದಾಟಿದ್ದರೂ, ಅಸ್ಪೃಶ್ಯತೆ ಎಂಬುದು ಸಮಾಜದಲ್ಲಿ ಇಂದಿಗೂ ಉಳಿದುಕೊಂಡು ಬಂದಿರುವುದು ಮಾನವತೆಗೆ ಒಂದು ಕಳಂಕವೆನ್ನಿಸಿದೆ.

**ಸಾಮಾಜಿಕ ನ್ಯಾಯದ ಪರಿಕಲ್ಪನೆ**

ಸಾಮಾಜಿಕ ನ್ಯಾಯವೆಂಬುದು ಆಧುನಿಕ ಪರಿಕಲ್ಪನೆಯಾಗಿದೆ. ಜಡ್ಡುಗಟ್ಟಿದ ಮೌಲ್ಯಗಳ ವಿರುದ್ಧ ಸಾಮಾಜಿಕ ಅಸಮಾನತೆಯ ವಿರುದ್ಧ ದಂಗೆಯೆದ್ದ ಹೋರಾಟ ಮಾಡಿದ ನಿದರ್ಶನಗಳು ಜಗತ್ತಿನ ಇತಿಹಾಸದಲ್ಲಿ ಸಾಕಷ್ಟು ಇವೆ. ಈ ಹೋರಾಟಗಳು ಒಮ್ಮೆ ಒಬ್ಬ ಜನ ನಾಯಕನ ಚಿಂತನೆಗಳಿಂದ ಪ್ರಭಾವಿತವಾಗಿ ಇಡೀ ಸಮುದಾಯವೇ ವ್ಯವಸ್ಥೆಯ ವಿರುದ್ಧ ತಿರುಗಿ ಬಿದ್ದಿದೆ. ಮತ್ತೊಂದು ನೆಲೆಯಲ್ಲಿ ಸಮುದಾಯಗಳೇ ತಮ್ಮ ಚಳುವಳಿಗಳ ಮೂಲಕ ನಾಯಕನನ್ನು ಹುಟ್ಟು ಹಾಕಿವೆ. ಈ ಎರಡು ಬಗೆಯ ಆಂದೋಲನಗಳು ಸಾಮಾಜಿಕ ನ್ಯಾಯದ ಉದ್ದೇಶಕ್ಕಾಗಿ ನಡೆದಿವೆ.

ಈಗೇ ಸಮರ್ಥ ನಾಯಕನೆಂಬುದು ಲೆನಿನ್ ಹೇಳುವ ಪ್ರಕಾರ "No class in history has achieved supremacy without producing its own political leaders. Its own advanced representatives capable of organizing the movement and directing it".

ಭಾರತದಲ್ಲಿನ ಪ್ರಾಚೀನ ಆಂದೋಲನಗಳು ಹೆಚ್ಚಾಗಿ ಧಾರ್ಮಿಕ ನೆಲೆಯಲ್ಲಿ ನಡೆದಿವೆ. ಆದರೆ, ಪ್ರಾಶ್ಚಿಮಾತ್ಯ ದೇಶದಲ್ಲಿ ರಾಜಕೀಯ ಪ್ರಜ್ಞೆಯಿಂದ ಪ್ರೇರಿತವಾಗಿ ಆಂದೋಲನಗಳು ನಡೆದಿವೆ. ಈ ಆಂದೋಲನಗಳ ಪೂರ್ವ ಇತಿಹಾಸಗಳೆಲ್ಲವೂ ವರ್ಗ ಸಂಘರ್ಷಗಳ ಇತಿಹಾಸವೇ ಆಗಿದೆ. ಅಂತೆಯೇ ಭಾರತದಲ್ಲಿ ಜಾತಿ ವ್ಯವಸ್ಥೆ, ಲಿಂಗ ತಾರತಮ್ಯ ಮತ್ತು ಪ್ರಜಾಪ್ರಭುತ್ವ ಹಾಗೂ ಸಾಮಾಜಿಕ ನ್ಯಾಯಗಳ ಹೋರಾಟಗಳು ನಡೆದಿದ್ದು ಇತಿಹಾಸ. ಈ ಬಗೆಯ ಚಾಲನೆಗಳು ದೊರೆತಿದ್ದು 1600 ರ ಕಾಲಾವಧಿಯ ದಶಕದಲ್ಲಿ ಬ್ರಿಟಿಷರು ಭಾರತಕ್ಕೆ ವ್ಯಾಪಾರಿಗಳಾಗಿ ಬಂದತಹ ಸಂದರ್ಭವನ್ನು ಸ್ಮರಿಸಬಹುದು. ಸಾಮಾಜಿಕ ನ್ಯಾಯದ ಹೋರಾಟದಲ್ಲಿ ಅಂಬೇಡ್ಕರವರ ಪಾತ್ರ ಹಿರಿದಾದುದು. ಜಗತ್ತಿನ ರಾಜಕೀಯ ಸಾಮಾಜಿಕ ಮತ್ತು ಧಾರ್ಮಿಕ ಇತಿಹಾಸಗಳನ್ನು ಆಳವಾಗಿ ಅಭ್ಯಾಸ ಮಾಡಿದ್ದು ಅವರು ತಮ್ಮ ಚಿಂತನೆಗಳ ಬೆಳಕಿನಿಂದ ಭಾರತೀಯ ಸಾಮಾಜವನ್ನು ಸಮಾನತೆಯೆಡೆಗೆ ಕೊಂಡ್ಯೊಯಲು ಪ್ರಯತ್ನ ಮಾಡಿದರು.

ಡಾ. ಅಂಬೇಡ್ಕರ್‌ರವರು ಸಾಮಾಜಿಕ ನ್ಯಾಯದ ಒಂದು ಪರಿಕಲ್ಪನೆಯನ್ನು ಪ್ರಧಾನವಾಗಿ ನಾವು ಮೂರು ರೀತಿಯಲ್ಲಿ ಕಾಣಬಹುದಾಗಿದೆ. ಅವುಗಳೆಂದರೆ ಅಸ್ಪೃಶತೆ ಮತ್ತು ಸಮಾನತೆ, ಮಹಿಳಾ ವಿಮೋಚನೆ, ಜೀತಪದ್ಧತಿ ಅಥವಾ ಕಾರ್ಮಿಕರ ಹಿತ ಕಾಯುವಿಕೆ ಇತ್ಯಾದಿ. ಬಾಬಾ ಸಾಹೇಬರು ಒಬ್ಬ ತಾತ್ವಿಕ ಮತ್ತು ಸೈದ್ಧಾಂತಿಕವಾದದ ಪ್ರತಿಪಾದಕರಾಗಿ ತಮ್ಮ ನಿಲುವುಗಳು ತನ್ನ ಸಮುದಾಯದ ಅಸಹನೆ, ನೋವು, ನಲಿವು, ಬಡತನ ಎಲ್ಲವನ್ನು ತಮ್ಮ ಜೀವನದ ಪ್ರತಿಯೊಂದು ಹೆಜ್ಜೆ–ಹೆಜ್ಜೆಯಲ್ಲಿ ಅನುಭವಿಸಿದ ಯಾತನೆ ಹೇಳತೀರದು. ಈ ಹಿನ್ನೆಲೆಯಲ್ಲಿ ನಾನು ಅನುಭವಿಸಿದ ಯಾತನೆ ನನ್ನ ಸಮುದಾಯವರು ಪಡಬಾರದೆಂಬ ದೃಢ ನಿಲುವಿನೊಂದಿಗೆ ಅವರು ಕೈಗೊಂಡ ಅನೇಕ ಕಾನೂನು ಮತ್ತು ಸಾಮಾಜಿಕ ನ್ಯಾಯದ ಪರಿದಿಯನ್ನು ಸಂವಿಧಾನದ ರಚನೆಯಲ್ಲಿ ಕಾಣಬಹುದು.

**ಪತ್ರಕರ್ತರಾಗಿ ಬಾಬಸಾಹೇಬರು**

ಶ್ರೀಯುತರು ತಮ್ಮ ಚಿಂತನೆಯನ್ನು ಜಗತ್ತಿಗೆ ತಿಳಿಯಪಡಿಸಲು ಆಯ್ದುಕೊಂಡ ಕ್ಷೇತ್ರ ಮುದ್ರಣ ಮಾಧ್ಯಮ. ಇದರ ಮುಖಾಂತರ ತನ್ನ ಸಮುದಾಯದ ಆಗು–ಹೋಗುಗಳನ್ನು ಮತ್ತು ಅವರು ಅನುಭವಿಸುತ್ತಿರುವ ಸಮಸ್ಯೆಗಳ ಬಗ್ಗೆ ತಿಳಿಸಲು ಅನೇಕ ರೀತಿಯಾಗಿ ಶ್ರಮಿಸಿದರು. 1920

ರಿಂದ 1956ರ ವರೆಗೆ ಸುಮಾರು ಮೂರುವರೆ ದಶಕಗಳ ಕಾಲ ಪತ್ರಕರ್ತರಾಗಿ ದುಡಿದರು. ಈ ಅವಧಿಯಲ್ಲಿ ಮೂಕನಾಯಕ, ಬಹಿಷ್ಕೃತ ಭಾರತ, ಜನತಾ, ಪ್ರಬುದ್ಧ ಭಾರತ ಪತ್ರಿಕೆಗಳನ್ನು ಪ್ರಕಟಿಸಿ ಇವುಗಳ ಮೂಲಕ ಭಾರತೀಯ ಸಮಾಜದಲ್ಲಿ ಎದುರಿಸುತ್ತಿದ್ದ ಸಾಮಾಜಿಕ, ರಾಜಕೀಯ, ಆರ್ಥಿಕ, ಶೈಕ್ಷಣಿಕ ಸಮಸ್ಯೆಗಳು ಮತ್ತು ಅವುಗಳಿಗೆ ಪರಿಹಾರವನ್ನು ಚರ್ಚಿಸಿದರು. 1920ರ ಜುಲೈ 30ರಂದು ಕೊಲ್ಲಾಪುರದ ಶಾಹು ಮಹಾರಾಜರ ಆರ್ಥಿಕ ನೆರವಿನಿಂದ 'ಮೂಕನಾಯಕ' ಎಂಬ ಮರಾಠಿ ಪತ್ರಿಕೆಯನ್ನು ಪ್ರಾರಂಭಿಸಿದರು. ಅಸ್ಪೃಶ್ಯರು ಮಾತುಬಾರದ ಮೂಕರಂತೆ ಬದುಕುವುದನ್ನು ವಿರೋಧಿಸುವುದು ಮತ್ತು ಸಮಾನತೆಯನ್ನು ಕಲ್ಪಿಸುವುದು ಮೂಕ ನಾಯಕ ಪತ್ರಿಕೆಯ ಮೂಲ ಆಶಯವಾಗಿತ್ತು. ತನ್ನ ವರ್ಗದ ಜನರ ಅಸಹನೆ ಮತ್ತು ಭಾರತದ ಆಗಿನ ವಸ್ತುಸ್ಥಿತಿಯನ್ನು ಎಳೆ–ಎಳೆಯಾಗಿ ಬಿಚ್ಚಿಟ್ಟರು. ಮುಂದೆ ಅವರು ಬಹಿಷ್ಕೃತ ಭಾರತ ಪತ್ರಿಕೆಯನ್ನು 1927ರಲ್ಲಿ ಆರಂಭಿಸಿದರು.

ಮುಂದೆ ಅವರು ಜನತಾ ಮತ್ತು ಪ್ರಬುದ್ಧ ಭಾರತ ಎಂಬಂತಹ ಪತ್ರಿಕೆಗಳನ್ನು ಪ್ರಾರಂಭಿಸಿದರು. ಪ್ರಬುದ್ಧ ಭಾರತ ಅವರ ಮರಣೋತ್ತರ ನಂತರವೂ ಅನೇಕ ವರ್ಷಗಳು ನಡೆಯಿತು. ಅಂಬೇಡ್ಕರ್‌ರವರು ಒಬ್ಬ ಪತ್ರಕರ್ತರಾಗಿ ಪತ್ರಿಕಾ ಧೋರಣೆಯನ್ನು ಜನಪರ ಜೀವನ ಮತ್ತು ಸಂಸ್ಕೃತಿಯ ಪರವಾದ ಒಂದು ಜನಾಂದೋಲನವನ್ನು ಕಟ್ಟುವ ಸಲುವಾಗಿ ದುಡಿದರು. ರಾಷ್ಟ್ರೀಯ ಜೀವನದ ಒಂದು ನಿರ್ಣಾಯಕವೂ ಹಾಗೂ ಗಂಭೀರವಾದ ಆ ಪರಿಸ್ಥಿತಿಯಲ್ಲಿ, ಭವಿಷ್ಯದ ರಾಷ್ಟ್ರದ ಸುಭದ್ರತೆಯನ್ನು ತನ್ನ ಜನರು ಅನುಭವಿಸುವ ಯಾತನೆಯನ್ನು ತಡೆಯಲು ಅವರು ಬಹುವಾಗಿ ಶ್ರಮಿಸಿದರು. ಹೀಗೆ ಅತ್ಯಂತ ಉತ್ಕೃಷ್ಟಮಟ್ಟದ ಜ್ಞಾನದಾಹದಿಂದ ಅನೇಕಾನೇಕ ಲೇಖನಗಳನ್ನು ಬರೆದರು.

**ಮಹಿಳಾ ವಿಮೋಚನೆ**

ಬಾಬಸಾಹೇಬರ ಹೋರಾಟವು ಬಹುಮುಖ ಉಳ್ಳದ್ದು ಮತ್ತು ಪ್ರಗತಿಪರವಾದದ್ದು ಎಂಬುದನ್ನು ಭಾರತದ ಮಹಿಳೆಯರ ಹಕ್ಕುಗಳಿಗಾಗಿ ಮಾಡಿದ ಹೋರಾಟಗಳು ಸಾಕ್ಷೀಕರಿಸುತ್ತವೆ. ಮನುಸ್ಮೃತಿಯು ಸ್ತ್ರೀಯರ ದಾಸ್ಯತ್ವಕ್ಕೆ ಕಾರಣವಾಗಿದೆ ಎಂಬ ನಿಲುವನ್ನು ಹೊಂದಿದ್ದರು. ಮನು "ಸ್ತ್ರೀ ಸ್ವಾತಂತ್ರಂ ಅರ್ಹತಿ" ಎಂದು ಹೇಳಿ ಸ್ತ್ರೀಯನ್ನು ಸಾಮಾಜಿಕ, ಆರ್ಥಿಕ, ರಾಜಕೀಯ ಮತ್ತು ಧಾರ್ಮಿಕವಾಗಿ ಅಧೋಗತಿಗಿಳಿಸಿದ್ದರು. ಆದ್ದರಿಂದ ಸ್ತ್ರೀ ಉದ್ಧಾರದ ಬಗ್ಗೆ ಕಾಳಜಿವಹಿಸುವುದು, ಹಿಂದೂ ಸಮಾಜದಲ್ಲಿ ಸುಧಾರಣೆಯನ್ನು ತರುವುದಾಗಿತ್ತು. ಆದರೆ ಪ್ರಸ್ತುತ ಯಾವ ಮಹಿಳೆಯರು ಕೂಡ ಸ್ಮರಿಸದೇ ಇರುವುದು ದುರಂತವೇ ಸರಿ. ವಿವಿಧ ಚಿಂತನೆಗಳನ್ನು ಕಾರ್ಯರೂಪಕ್ಕೆ ತರುವುದರ ಮುಖಾಂತರ ಸ್ತ್ರೀ ಉದ್ಧಾರಕ್ಕಾಗಿ ಬಾಬಾ ಸಾಹೇಬರು ಶ್ರಮಿಸಿದರು. ಅವರು ಕೈಗೊಂಡಂತಹ ಪ್ರಮುಖ ಕಾರ್ಯವೆಂದರೆ ಮಹಿಳೆಯರ ಸಮಾನ ಹಕ್ಕುಗಳಿಗಾಗಿ "ಹಿಂದೂ

ಕೋಡ್ ಬಿಲ್" ಸೇರ್ಪಡೆ ಮಾಡುವುದರ ಮುಖಾಂತರ ಮಹಿಳೆಯರ ಸಮಸ್ಯೆಗಳನ್ನು ಮಾನವೀಯ ನೆಲೆಯಲ್ಲಿ ಗ್ರಹಿಸುವುದರೊಂದಿಗೆ, ಅವುಗಳಿಗೆ ಪರಿಹಾರವೂ ಕಂಡುಕೊಳ್ಳುವ ನಿಟ್ಟಿನಲ್ಲಿ ಅಂಬೇಡ್ಕರ್‌ರವರು ಚಿಂತಿಸಿದ್ದಾರೆ. ಮಹಿಳಾ ವಿಮೋಚನೆಗೆ ಸಂಬಂಧಿಸಿದಂತೆ ಹಿಂದೂ ಕೋಡ್‌ಬಿಲ್ ಕೇಶನ ಅಂಶಗಳನ್ನು ಒಳಗೊಂಡಿತ್ತು. ಇದನ್ನು ಬಾಬಸಾಹೇಬರು ಸಂಸತ್ತಿನಲ್ಲಿ ಫೆಬ್ರವರಿ 05, 1951ರಲ್ಲಿ ಮಂಡಿಸಿದರು. ಹಿಂದೂ ಕೋಡ್ ಬಿಲ್ ಪ್ರಮುಖವಾಗಿ ಹುಟ್ಟಿನ ಆಧಾರದ ಹಕ್ಕಗಳ ನಿರಾಕರಣೆ, ಹೆಣ್ಣಿಗೆ ಆಸ್ತಿಯ ಹಕ್ಕು, ತಂದೆಯ ಆಸ್ತಿಯಲ್ಲಿ ಹೆಣ್ಣು ಮಕ್ಕಳಿಗೆ ಪಾಲು, ವಿವಾಹ ವಿಚ್ಛೇಧನೆಗೆ ಅವಕಾಶ ಮುಂತಾದ ಪ್ರಧಾನ ಅಂಶಗಳನ್ನು ಒಳಗೊಂಡಿತ್ತು. ಈ ಕಾಯಿದೆಯು ಅದರ ವ್ಯವಸ್ಥೆಯ ಬೆಳವಣಿಗೆ, ಇದರ ಬಗ್ಗೆ ವಿರೋಧ ವ್ಯಕ್ತಪಡಿಸುವುದರ ಮುಖಾಂತರ ಸಂಸತ್ತಿನಲ್ಲಿ ಬಿಲ್ ಮಂಡನೆಯಾಗದಂತೆ ತಿರಸ್ಕೃತವಾಯಿತು. ಇದರ ಪರದಿ ಕೇವಲ ಒಂದು ವರ್ಗದವರಿಗಲ್ಲ, ಎಲ್ಲಾ ಸಮುದಾಯದ/ಮತೀಯ ಸ್ತ್ರೀಯರನ್ನು ಸಮಾನರನ್ನಾಗಿ ಪರಿಗಣಿಸುವ ಕಾನೂನಾಗಿತ್ತು. ಆದರೆ ಈ ಕಾನೂನು ಸನಾತನ ಧರ್ಮದ ಸಂಸತ್ ಸದಸ್ಯರು ಇದಕ್ಕೆ ಬೆಂಬಲ ನೀಡದ ಸಲುವಾಗಿ ಸೆಪ್ಟಂಬರ್ 22, 1951ರಲ್ಲಿ ಸಂಸತ್ತಿನಲ್ಲಿ ಅಂಗೀಕಾರವಾಗದೆ ತಿರಸ್ಕೃತವಾಯಿತು. ಇದರಿಂದ ಬೇಸತ್ತು, ಬಾಬಸಾಹೇಬರು ಸೆಪ್ಟಂಬರ್ 27, 1951ರಂದು ತಮ್ಮ ಮಂತ್ರಿ ಸದಸ್ಯತ್ವಕ್ಕೆ ರಾಜೀನಾಮೆಯನ್ನು ನೀಡುವುದರ ಮುಖಾಂತರ ಸಮ–ಸಮಾಜದ ಚಿಂತನೆಗೆ ತಮ್ಮಲ್ಲಿನ ಬದ್ಧತೆಗೆ ಸಾಕ್ಷಿಯಾದರು.

**ದಲಿತರ ಹಕ್ಕು ಪ್ರತಿಪಾದನೆಗಾಗಿ ಹೋರಾಟ**

ಬಾಬಾ ಸಾಹೇಬರು ತಮ್ಮ ಜೀವನದ ಬಹುಭಾಗವನ್ನು ಹಿಂದುಳಿದ ಮತ್ತು ದಲಿತ ಸಮುದಾಯಗಳ ಅಭಿವೃದ್ಧಿಗೆ ಅರ್ಪಿಸಿಕೊಳ್ಳುವುದರ ಮುಖಾಂತರ ತಾನು ಅನುಭವಿಸಿದಂತಹ ನೋವು–ಕಷ್ಟಗಳನ್ನು ಮುಂದಿನ ಪೀಳಿಗೆಗೆ ಅನುಕರಣೆಯಾಗದಂತೆ ಅನೇಕ ತೆರನಾದಂತಹ ರೀತಿಯಲ್ಲಿ ಅವರು ಹೋರಾಡಿದರು. ದಲಿತರು ತಮ್ಮ ಸಮುದಾಯದ ಪ್ರಗತಿಯನ್ನು ಸಾಧಿಸಬೇಕಾದರೆ ಕೆಲವು ಸೂತ್ರಗಳು ಅನುಸರಿಸಲೇ ಬೇಕಾಗುವುದುದೆಂದು ಪಂಚಸೂತ್ರಗಳನ್ನು ಪ್ರತಿಪಾದಿಸಿದರು. ಅವುಗಳೆಂದರೆ

1. **ಸ್ವ–ಸುಧಾರಣೆ:** ತನ್ನ ಸ್ವಂತ ಜೀವನ ಕ್ರಮವನ್ನು ಅನುಸರಿಸುವಿಕೆ
2. **ಸ್ವ–ಏಳ್ಗೆ:** ತನ್ನ ಸಂತಸದ ಉನ್ನತಿಯ ಕುರಿತು ತಾನೇ ಯೋಚಿಸಿ, ತಾನೇ ಕಾರ್ಯ ಪ್ರವೃತ್ತರಾಗುವುದು.
3. **ಸ್ವಾವಲಂಬನೆ:** ಯಾರನ್ನು ಅವಲಂಭಿಸಿಕೊಳ್ಳದೇ ತನ್ನ ಸ್ವಂತ ಪರಿಶ್ರಮವನ್ನು ಬೆಳೆಸಿಕೊಳ್ಳುವುದು.

4. **ಸ್ವಾಭಿಮಾನ:** ಯಾವುದೇ ಕಾರಣಕ್ಕೂ "ಸ್ವಯಂ–ಮರ್ಯಾದೆ"ಯನ್ನು ಅಥವಾ ಆತ್ಮಗೌರವವನ್ನು ಕೈಬಿಡದಿರುವುದು. ಮತ್ತು
5. **ಸ್ವ–ನಂಬಿಕೆ:** ತನ್ನ ಮೇಲೆ, ತನ್ನ ಸಾಮರ್ಥ್ಯ ಹಾಗೂ ವ್ಯಕ್ತಿತ್ವದ ಮೇಲೆ ನಂಬಿಕೆಯಲ್ಲಿ ಮುನ್ನಡೆಯುವುದಾಗಿದೆ.

ಸೈಮನ್ ಆಯೋಗ ಮತ್ತು ದುಂಡು ಮೇಜಿನ ಪರಿಷತ್ತುಗಳಲ್ಲಿ ಸ್ವಯಂ–ಆಡಳಿತ ಭಾರತದಲ್ಲಿ ದಲಿತರ ಹಕ್ಕು, ಅಧಿಕಾರಿಗಳು ಒಂದು ಭದ್ರತೆಗಾಗಿ ಸಮಾನ ಪೌರಹಕ್ಕು ತಾರತಮ್ಯದ ವಿರುದ್ಧ ರಕ್ಷಣೆ, ಶಾಸನ ಸಭೆಯಲ್ಲಿ ಅವಕಾಶ, ಸರ್ಕಾರಿ ಸೇವೆ ನೌಕರಿಗಳಲ್ಲಿ ಮೀಸಲಾತಿ ಸೌಲಭ್ಯ, ದಲಿತರು ಶಾಸನ ಸಭೆಗೆ ಆಯ್ಕೆಯಾಗಲು ದಲಿತರಿಗೆ ಪ್ರತ್ಯೇಕ ಮತದಾನ ವ್ಯವಸ್ಥೆ ಈ ಮೊದಲಾದ ಬೇಡಿಕೆಗಳ ಮುಖೇನ ದಲಿತರ ಹಕ್ಕುಗಳ ಬಗ್ಗೆ ಒತ್ತಾಯ ಹೇರಿದರು. ದಲಿತರ ಪ್ರತ್ಯೇಕ ರಾಜಕೀಯ ಹಕ್ಕುಗಳ ಪ್ರತಿಪಾದನೆಯ ಕಾರಣವಾಗಿ ಗಾಂಧೀಜಿ ಮತ್ತು ಅಂಬೇಡ್ಕರ್‌ರವರ ನಡುವೆ ಅನೇಕ ಸಲ ತಾತ್ವಿಕ, ತಾರ್ಕಿಕ ಚರ್ಚೆಗಳು ನಡೆದಿವೆ. ಅಂಬೇಡ್ಕರ್‌ರವರು ಗಾಂಧೀಜಿಯವರೊಂದಿಗೆ ಚರ್ಚಿಸುತ್ತ. ನನಗೆ ಸ್ವದೇಶವೆಂಬುದಿಲ್ಲ (I have no home land) ಎಂದು ಒತ್ತಿ ಹೇಳುವ ಮುಖಾಂತರ ತನ್ನ ಸಮುದಾಯದ ಕನಿಷ್ಠ ಸ್ಥಿತಿಯ ಬಗ್ಗೆ ತಮ್ಮ ಪ್ರತಿರೋಧವನ್ನು ವ್ಯಕ್ತಪಡಿಸುತ್ತಾರೆ. "How can I call this land my own home land? And this religion, my own, wherein we are treated worse than cats and dogs, wherein we cannot get water to drink. No self respecting untouchable worth the name will be proud of this land". (ಇದು ನನ್ನ ತಾಯಿನಾಡು ಎಂದು ಹೇಗೆ ಕರೆಯಲಿ ಮತ್ತು ಈ ಧರ್ಮ ನನ್ನದೆಂದು ಹೇಗೆ ಹೇಳಿಕೊಳ್ಳಲಿ? ನಮ್ಮನ್ನು ಬೆಕ್ಕು, ನಾಯಿಗಳಿಗಿಂತಲೂ ಕಡೆಯಾಗಿ ನೋಡುತ್ತಿರುವಾಗ, ನಮಗೆ ಕುಡಿಯಲು ನೀರು ದೊರಕದಿರುವಾಗ ಆತ್ಮಗೌರವವುಳ್ಳ ಯಾವ ಅಸ್ಪೃಶ್ಯನೂ ಈ ದೇಶ ನನ್ನದೆಂದು ಹೆಮ್ಮೆಯಿಂದ ಹೇಳಿಕೊಳ್ಳಲಾರ). ಈ ಹೇಳಿಕೆ ಒಂದು ಸಾಮಾನ್ಯ ಹೇಳಿಕೆಯಲ್ಲ, ಈ ಹೇಳಿಕೆ ಒಬ್ಬ ಶೋಷಿತ, ಅವಮಾನಿತ ಅಸ್ಪೃಶ್ಯ, ಸ್ವಾಭಿಮಾನಿಯೂ ಆಗಿದ್ದಾಗ ಅವರ ರಕ್ತದಲ್ಲಿ ಬೆರೆತು ಹೊರಹೊಮ್ಮುವ ಹೇಳಿಕೆ ಇದು. ನನ್ನದಲ್ಲದ ನೆಲದಲ್ಲಿ ನಿಂತಿದ್ದೇನೆ ಎನ್ನುವ ಕಲ್ಪನೆಯೇ ಅಂಗಾಲು ಕುಸಿಯುತ್ತಿರುವ, ರುಂಡವನ್ನು ಆಪೋಶನ ಮಾಡಿಕೊಳ್ಳುತ್ತಿರುವ ಅಸಹಾಯಕ ಪರಿಸ್ಥಿತಿಯನ್ನು ಸಾರಿ ಹೇಳುತ್ತದೆ.

### ದಲಿತರ ಉದ್ಧಾರಕ್ಕಾಗಿ ಶಿಕ್ಷಣ

ದಲಿತರ ಸಾಮಾಜಿಕ ಭದ್ರತೆಯನ್ನು ಹೊಂದಲು ಮತ್ತು ಅವರು ತಮ್ಮ ಅಭ್ಯುಧಯವನ್ನು ಸಾಧಿಸಲು ಶಿಕ್ಷಣವು ಅಗತ್ಯವಾಗಿದೆ. ಶಿಕ್ಷಣದ ಮೂಲಕ ಉದ್ದೇಶಿತ ಸಾಮಾಜಿಕ, ರಾಜಕೀಯ ಮತ್ತು ಆರ್ಥಿಕತೆಯಲ್ಲಿ ಬದಲಾವಣೆಯನ್ನು ತರಬಹುದೆಂದು ಪ್ರತಿಪಾದಿಸಿದರು. ಈ ಮುಖಾಂತರ

ತನ್ನ ಸಮುದಾಯದವರ ಅಭಿವೃದ್ಧಿಗೆ ಶೈಕ್ಷಣಿಕ ತಜ್ಞರಾಗಿ ಅನೇಕ ತೆರೆನಾದಂತಹ ಬದಲಾವಣೆಗಳನ್ನು ತರುವಲ್ಲಿ ಶ್ರಮಿಸಿದರು.

ಈ ನಿಟ್ಟಿನಲ್ಲಿ ದಲಿತೋದ್ಧಾರ ಕಾರ್ಯದಲ್ಲಿ ಬಾಬಸಾಹೇಬರು "ಬಹಿಷ್ಕೃತ ಹಿತಕಾರಣಿ" ಸಭಾ ಸ್ಥಾಪನೆಯನ್ನು ಮಾಡುವುದರ ಮುಖೇನ ವಿವಿಧ ಶಿಕ್ಷಣ ಸಂಸ್ಥೆಗಳನ್ನು ದಲಿತರಿಗೆ ಪ್ರಾರಂಭಿಸಿದರು. ಈ ಮಹಾಸಭೆಯ ಉದ್ದೇಶದ ಧ್ಯೇಯ ಓದು, ಓದಿ ಹೇಳು, ಇತರರಿಂದ ತಿಳಿದುಕೋ, ಅರ್ಥೈಸಿಕೋ ಮತ್ತು ಇತರರಿಗೆ ವಿವರಿಸುವುದು ಎಂಬುದಾಗಿತ್ತು. ಸ್ವಾಭಿಮಾನಿಯಾಗಿ ಬದುಕುವುದು ಪ್ರತಿಯೊಬ್ಬನ "ಜನ್ಮದತ್ತವಾದ ಹಕ್ಕು". ಆದರೆ ಅನಕ್ಷರತೆ ದಲಿತರ ಶತ್ರುವಾಗಿ ಅವರ ಸ್ವಾಭಿಮಾನದ ಭಾವವನ್ನೇ ಜಡ್ಡುಗಟ್ಟಿಸಿ ಬಿಟ್ಟಿದೆ ಎಂದು ಅವರು ಮನಗಂಡಿದ್ದರು. ಅದಕ್ಕಾಗಿ ಅವರು ಹತ್ತು ಹಲವು ಶೈಕ್ಷಣಿಕ ಕಾರ್ಯಗಳನ್ನು ಹಮ್ಮಿಕೊಂಡಿದ್ದರು. ಅವುಗಳೆಂದರೆ ಉಚಿತ ಮತ್ತು ಕಡ್ಡಾಯ ಶಿಕ್ಷಣ ನೀತಿ ಅನುಸರಣೆ, ವಯಸ್ಕರ ಶಿಕ್ಷಣ ಪ್ರಸಾರ, ಸರಕಾರದ ವೆಚ್ಚದಲ್ಲಿ ಹಿಂದುಳಿದ ವರ್ಗಗಳ ಬುದ್ಧಿವಂತ ವಿದ್ಯಾರ್ಥಿಗಳಿಗೆ ಉನ್ನತ ಶಿಕ್ಷಣಕ್ಕಾಗಿ ವಿದೇಶಗಳಿಗೆ ಕಳುಹಿಸುವಿಕೆ, ಮುಂಬೈ, ಕಲ್ಕತ್ತಾ, ಮದ್ರಾಸ್ ಗಳಲ್ಲಿ ವಿಶ್ವವಿದ್ಯಾಲಯಗಳನ್ನು ಸ್ಥಾಪಿಸುವಿಕೆ, ಪ್ರತಿಯೊಂದು ಪ್ರಾಂತೀಯ ಸರಕಾರವು ಪರಿಶಿಷ್ಟ ಜಾತಿಯವರಲ್ಲಿ ಶಿಕ್ಷಣಕ್ಕಾಗಿ ಮುಂಗಡ ಪತ್ರದಲ್ಲಿ ನಿಗದಿತ ಹಣವನ್ನು ಮೀಸಲಿರಬೇಕು, ವಿದೇಶಗಳಲ್ಲಿನ ವ್ಯಾಸಾಂಗದ ವೆಚ್ಚವನ್ನು ಸರಕಾರವೇ ಪೂರೈಸಬೇಕು, ಪ್ರಾಥಮಿಕ ಶಿಕ್ಷಣವನ್ನು ಕಡ್ಡಾಯಗೊಳಿಸಬೇಕು ಮತ್ತು ಸಾಮಾಜಿಕ, ಆರ್ಥಿಕ, ರಾಜಕೀಯ ಹಕ್ಕನ್ನು ಪಡೆಯಲು ಹೋರಾಡುವುದು ಇತ್ಯಾದಿಗಳು.

ಭಾರತದ ಭವಿಷ್ಯ ನಿರ್ಣಯ ಹಂತದಲ್ಲಿರುವ ಆ ಸಂದರ್ಭದಲ್ಲಿ ಅಂದಿನ ಕಾಲದ ಸಮಸ್ತ ನಿಮ್ನ ವರ್ಗದ (ಅಸ್ಪೃಶ್ಯರು) ಭವಿಷ್ಯವೂ ಕೂಡಾ ನಿರ್ಣಾಯಕ ಹಂತದಲ್ಲಿದೆ ಎಂಬ ವಿಷಮ ಸ್ಥಿತಿಯನ್ನು ಬಾಬಾ ಸಾಹೇಬರು ಬ್ರಿಟೀಷರಿಗೆ ಮನುವರಿಕೆ ಮಾಡಿಕೊಟ್ಟರು. ಬ್ರಿಟಿಷರಿಂದ ಭಾರತೀಯರಿಗೆ ಅಧಿಕಾರದ ಹಸ್ತಾಂತರವಾಗದಿದ್ದಲ್ಲಿ ಹಿಂದೂ ಅಥವಾ ಮುಸ್ಲಿಂ ಯಾವುದೇ ಒಂದು ಜನಾಂಗಕ್ಕೆ ದೇಶದ ಒಂದು ಅಧಿಕಾರದ ಕಾರ್ಯ ಹಸ್ತಾಂತರವಾಗ ಕೂಡದು, ಅದರ ಬದಲಾಗಿ ಪ್ರತಿಯೊಂದು ವರ್ಗದ ಜನಸಂಖ್ಯಾನುಸಾರವಾಗಿ ಅಧಿಕಾರವು ಸಮಾನವಾಗಿ ಹಂಚಿಕೆಯಾಗಬೇಕೆಂದು ಬಲವಾಗಿ ವಾದಿಸಿದರು.

ಅಸ್ಪೃಶ್ಯತೆಯು ಜಾತಿ ಪದ್ಧತಿಯಿಂದಲೇ ಜನಿಸಿದೆ. ಅಸ್ಪೃಶ್ಯರು ಹಿಂದೂ ಸಮಾಜದ ಒಂದು ಭಾಗವಾಗಿ ಪ್ರತ್ಯೇಕಿಸಲ್ಪಟ್ಟಿದ್ದಾರೆ. ಅಸ್ಪೃಶ್ಯರಲ್ಲಿ ಜನಶಕ್ತಿ, ಧನಶಕ್ತಿ ಮತ್ತು ಬುದ್ಧಿಶಕ್ತಿ ಇಲ್ಲವಾಗಿದೆ. ಇದಕ್ಕೆ ಭಾರತೀಯ ಸಾಮಾಜಿಕ ವ್ಯವಸ್ಥೆ ಕಾರಣವೆಂಬುದು ಅಂಬೇಡ್ಕರ್‌ರವರ ಅಭಿಪ್ರಾಯವಾಗಿದೆ. ಅಸ್ಪೃಶ್ಯರನ್ನು ಮಾನವರೆಂದು ಪರಿಗಮಿಸದೆ, ಕುಡಿಯುವ ನೀರು ಕೊಡದ, ದೇವಸ್ಥಾನಗಳಿಗೆ ಪ್ರವೇಶ ನೀಡದೆ, ವಿದ್ಯೆ ಕಲಿಯಲು ಬಿಡದೆ, ನಾಯಿಗಳನ್ನು ಸ್ಪರ್ಶಿಸಿದರೂ, ಅವರನ್ನು

ಸ್ಪರ್ಶಿಸಬಾರದು ಎನ್ನುವ ಮಾತೇ ಅಲ್ಲವೆಂದಿದ್ದಾರೆ. ಈ ನಿಟ್ಟಿನಲ್ಲಿ ಅಂದಿನ ಸಾಮಾಜಿಕ ವ್ಯವಸ್ಥೆಯಲ್ಲಿ ಇದ್ದಂತಹ ಕೆಟ್ಟ, ಅಮಾನುಷ ಹಾಗೂ ಅನಾಗರಿಕ ರೀತಿಯ ಅಸ್ಪೃಶ್ಯತೆಯನ್ನು ಕಟುವಾಗಿ ಟೀಕಿಸಿದ ಅಂಬೇಡ್ಕರ್‌ರವರು "ಅಸ್ಪೃಶ್ಯತಾ ವಿರೋಧಿ ಚಳುವಳಿ"ಯನ್ನು ಹಂತ–ಹಂತವಾಗಿ ಈ ಕೆಳಕಂಡಂತೆ ಪ್ರಾರಂಭಿಸಿದರು. ಅವುಗಳೆಂದರೆ

- 1920ರಲ್ಲಿ ನಾಗಪುರದಲ್ಲಿನ ಅಖಿಲ ಭಾರತ ಅಸ್ಪೃಶ್ಯ ಮಹಾ ಸಮ್ಮೇಳನದಲ್ಲಿ ದಲಿತರ ಒಗ್ಗೂಡಿಸು ಪ್ರಥಮ ಪ್ರಯತ್ನ ನಡೆಯಿತು.
- 1924ರಲ್ಲಿ ಮುಂಬಾಯಿ ಸಭೆಯಲ್ಲಿ ಬಹಿಷ್ಕೃತ ಹಿತಕಾರಣಿ ಸಭಾ ಎಂಬ ಸಂಘವನ್ನು ಸ್ಥಾಪಿಸಿ ಅಂಬೇಡ್ಕರ್‌ರವರು ಅದರ ಅಧ್ಯಕ್ಷರಾದರು. ಅದು ದಲಿತರಿಗೆ ಶಿಕ್ಷಣ ನೀಡುವ ಉದ್ದೇಶವನ್ನು ಹೊಂದಿತು.
- 1927ರ ಮಾರ್ಚ್‌ನಲ್ಲಿ ಕೊಲಾಬಾ ಜಿಲ್ಲೆಯ ಮಹಾದ್‌ನ ಔರಾದ್ ಕೆರೆ ನೀರನ್ನು ಕುಡಿಯುವಂತೆ ಅಸ್ಪೃಶ್ಯರಿಗೂ ಅವಕಾಶ ಮಾಡಿಸಿದರು.
- ನಾಸಿಕ್‌ಗೆ ಶ್ರೀರಾಮ ದೇವಾಲಯಕ್ಕೆ ಅಸ್ಪೃಶ್ಯರು ಪ್ರವೇಶ ನೀಡುವಂತೆ ಮಾಡುವ ಸತ್ಯಾಗ್ರಹದ ನಾಯಕತ್ವವನ್ನು ಅಂಬೇಡ್ಕರ್‌ರವರು ವಹಿಸಿದರು.
- ಶೋಷಿತರಿಗೆ ಚುನಾವಣೆಯಲ್ಲಿ ಮೀಸಲು ದೊರೆಯುವಂತೆ ಮಾಡಿದರು.
- ಅಂತಿಮವಾಗಿ ಅಸ್ಪೃಶ್ಯತೆಯ ವಿರುದ್ಧ ಸೆಟೆದು ನಿಂತ ಅವರು ಹಿಂದೂ ಧರ್ಮವನ್ನು ತೊರೆದು ಬೌದ್ಧಧರ್ಮವನ್ನು ಸ್ವೀಕರಿಸಿ, ತಮ್ಮ ಅನುಯಾಯಿಗಳೂ ಸ್ವೀಕರಿಸುವಂತೆ ಉಪದೇಶಿಸಿದರು.
- ಅಸ್ಪೃಶ್ಯತೆಯ ನಿವಾರಣೆಗಾಗಿ ಅಂಬೇಡ್ಕರ್ ರವರು ಈ ಕೆಳಕಂಡ ಪರಿಹಾರಗಳನ್ನು ಸೂಚಿಸಿದರು.

**ಇದರೊಂದಿಗೆ ಪಕ್ಷಪಾತವಿಲ್ಲದ (ನಿಷ್ಪಕ್ಷಪಾತವಾದ) ನೈಜ ಧರ್ಮ ಸ್ಥಾಪನೆಗೆ ಸಲಹೆ ಕೊಟ್ಟರು.**

- ಎಲ್ಲಾ ಹಿಂದೂಗಳಿಗೂ (ಅಸ್ಪೃಶ್ಯರನೊಳಗೊಂಡಂತೆ) ಅನ್ವಯವಾಗುವಂತ ಹಿಂದೂ ಧರ್ಮದ ಒಂದೇ ಗ್ರಂಥವನ್ನು ರಚಿಸಬೇಕು.
- ವಂಶಪಾರಂಪರ್ಯ ಪುರೋಹಿತ ವೃತ್ತಿಯನ್ನು ಕೊನೆಗೊಳಿಸಿ, ಉದ್ಯೋಗ ಪಡೆಯಲು ಅರ್ಹತಾ ಪರೀಕ್ಷೆಯನ್ನು ನಡೆಸಬೇಕು.
- ಪುರೋಹಿತರು ರಾಜ್ಯದ ಸೇವಕನಾಗಿರಬೇಕು ಹಾಗೂ ಆತನ ನೀತಿ, ನಡವಳಿಕೆ ಸಂಪೂರ್ಣವಾಗಿ ರಾಜ್ಯದ ನಿಯಂತ್ರಣಕ್ಕೊಳಪಡಬೇಕು.

- ವೇದಶಾಸ್ತ್ರಗಳನ್ನು ತಿರಸ್ಕರಿಸಬೇಕು ಮತ್ತು ಅಂತರ್‌ಜಾತಿ ವಿವಾಹಗಳು ಹೆಚ್ಚಾಗಬೇಕು ಎಂಬುದಾಗಿ ಹೇಳಿದರು.

ಹೀಗೆ ಅಸ್ಪೃಶ್ಯತೆಯ ನಿರ್ಮೂಲನೆಗಾಗಿ ಹಿಂದೂಗಳಲ್ಲಿ ನವೀನ ಮೌಲ್ಯಗಳನ್ನು ಅಳವಡಿಸಿಕೊಳ್ಳಬೇಕೆಂದು, ಅದಕ್ಕೆ ಹೊಸ ಸೈದ್ಧಾಂತಿಕ ತಳಹದಿಯನ್ನು ಹಾಕಬೇಕೆಂದು ತಿಳಿಸುತ್ತಾ ತನ್ನ ಸಮುದಾಯಕ್ಕೆ ಇದ್ದಂತಹ ಸಾಂಕೇತಿಕವಾದ ಅಡೆ–ತಡೆಗಳನ್ನು ನಿವಾರಿಸಲು ಬಹುವಾಗಿ ಹೋರಾಡುತ್ತಾ ಶ್ರಮಿಸಿದರು.

**ಜೀತ ಪದ್ಧತಿ ಅಥವಾ ಕಾರ್ಮಿಕರ ಹಿತಕಾಯುವಿಕೆ:**

ಅಂಬೇಡ್ಕರ್‌ರವರು ಒಬ್ಬ ವ್ಯಕ್ತಿಯಾಗಿ, ಶಕ್ತಿಯಾಗಿ ತನ್ನ ಸಮುದಾಯದ ಏಳಿಗೆಗಾಗಿ ದುಡಿದ ಮಹಾನ್ ನಾಯಕರಾಗಿ, ಎಲ್ಲಾ ವರ್ಗದ ಹಿತ ಬಯಸಿದ ಸಮಾಜ ಸುಧಾರಕರಾಗಿ ತಮ್ಮ ಚಿಂತನೆಗಳ ಮುಖಾಂತರ "ಕಾರ್ಮಿಕರ ಹಿತ ಕಾಯುವಿಕೆಯಲ್ಲೂ ಶ್ರಮಿಸಿದ್ದಾರೆ. ಕಾರ್ಮಿಕ ವರ್ಗವು ಭಾರತದಲ್ಲಿ ಬಹುವಾಗಿ ಶೋಷಿತ ವರ್ಗವಾಗಿದೆ. ಅದರಿಂದ ಅವರನ್ನು ಶೋಚನೀಯ ಸ್ಥಿತಿಯಿಂದ ಮೇಲೆತ್ತಿ ಸಾಮಾಜಿಕ ಭದ್ರತೆಯನ್ನು ಒದಗಿಸುವ ಗುರಿಯನ್ನು ಹೊಂದಿದ್ದರು".

ಕಾರ್ಮಿಕರ ಆಂದೋಲನದ ರಾಜಕೀಯ ಮುಖವಾಗಿ 'ಸ್ವತಂತ್ರ ಕಾರ್ಮಿಕ ಪಕ್ಷದ ಸ್ಥಾಪನೆ'ಯನ್ನು ಮಾಡಿದರು. (1936–37) ಇಂತಹ ಪಕ್ಷದ ಮೂಲಕ ರಾಜಕೀಯ ಅಧಿಕಾರವನ್ನು ಪಡೆಯುವುದಕ್ಕಿಂತಲೂ ಸಾಮಾಜಿಕ ನ್ಯಾಯವನ್ನು ದಲಿತ ಕಾರ್ಮಿಕರಿಗೆ ಒದಗಿಸಿ ಕೊಡುವುದೇ ಅವರ ಮುಖ್ಯ ಉದ್ದೇಶವಾಗಿತ್ತು. ಹೀಗೆ ಅವರು ಕೇಂದ್ರದಲ್ಲಿ ಸಚಿವರಾಗಿದ್ದಾಗ ಜಾರಿಯಾದ ಮುಖ್ಯವಾದ ಕಾರ್ಮಿಕ ಕಾಯ್ದೆ ಎಂದರೆ "ಕನಿಷ್ಠ ವೇತನದ ಮಸೂದೆ" ದಿನಕ್ಕೆ 08 ತಾಸುಗಳು ಮಾತ್ರ ದುಡಿಮೆ, ಅದಕ್ಕೂ ಹೆಚ್ಚು ದುಡಿಮೆಗೆ (ಓವರ್ ಟೈಮ್) ವೇತನ ಕೊಡುವ ಪದ್ಧತಿಯನ್ನು ಜಾರಿಗೆ ತಂದರು. ಅಲ್ಲದೇ ಉದ್ಯೋಗ ವಿನಿಮಯ ಕಛೇರಿ, ಕಾರ್ಮಿಕರ ನ್ಯಾಯಾಲಯ ಸ್ಥಾಪನೆಗೆ ಒತ್ತು, ಸಾಮಾಜಿಕ ಭದ್ರತೆ ಮತ್ತು ಔದ್ಯೋಗಿಕ ಸಂಬಂಧದ ಅಭಿವೃದ್ಧಿಗೆ ಆದ್ಯತೆ ನೀಡಿದರು.

1942–46ರ ಅವಧಿಯಲ್ಲಿ ಗವರ್ನರ್ ಜನರಲ್‌ರವರ ಕಾರ್ಯಕಾರಿ ಪರಿಷತ್ ಸದಸ್ಯರಾಗಿದ್ದಾಗ, ಕಾರ್ಮಿಕ ವರ್ಗದ ಹಿತಾಸಕ್ತಿಗಾಗಿ ಬಹಳಷ್ಟು ಶ್ರಮಿಸಿದರು. ಕಾರ್ಮಿಕರ ಸ್ಥಿತಿಯನ್ನು ಉತ್ತಮಗೊಳ್ಳಬೇಕೆಂದರೆ ಸರ್ಕಾರ, ಉದ್ಯೋಗಗಳು ಮತ್ತು ಧಣಿಗಳು, ಪರಸ್ಪರ ಜವಬ್ದಾರಿ, ಗೌರವ ಮತ್ತು ಕೊಂಡುಕೊಳ್ಳುವ ಭಾವನೆಯಿಂದ ಕೆಲಸ ಮಾಡಬೇಕೆಂದು ಅಭಿಪ್ರಾಯಪಟ್ಟಿದ್ದಾರೆ. ಹೀಗೆ ತಮ್ಮ ಗುರುತ್ವತೆಯ ಮುಖಾಂತರ ಕಾರ್ಮಿಕರ ಏಳಿಗೆಗೆ ದುಡಿದವರಾಗಿದ್ದಾರೆ.

**ಉಪಸಂಹಾರ**

ಇತಿಹಾಸದ ಮಹಾನ್ ಚಿಂತಕ, ಜ್ಞಾನ ಸೂರ್ಯ, ಭಾರತ ಭಾಗ್ಯವಿಧಾತ ಡಾ.ಬಿ.ಆರ್.ಅಂಬೇಡ್ಕರ್‌ರವರು ತಮ್ಮ ಬಹುಮುಖ ವ್ಯಕ್ತಿತ್ವದ ಮುಖೇನ ಸಮಾಜದಲ್ಲಿನ ಕಂದಕಗಳನ್ನು ತೋರಿಸುವುದರ ಜೊತೆಗೆ ಅಸ್ಪೃಶ್ಯ ಮತ್ತು ಹಿಂದುಳಿದ ಸಮುದಾಯದ ಅಭಿವೃದ್ಧಿಯೊಂದಿಗೆ ಇತರ ಮಾನವ ಸಮೂಹದ ಅಭ್ಯುದಯವನ್ನು ಬಯಸಿದ ಶ್ರೇಷ್ಠ ಚಿಂತಕರಾಗಿದ್ದಾರೆ. ಮನುಷ್ಯ ವಿರೋಧಿ ಸಾಮಾಜಿಕ ವ್ಯವಸ್ಥೆಯನ್ನು ಸರಿ ದಾರಿಗೆ ತರುವಂತಹ ಕಾರ್ಯವನ್ನು ಮಾಡುವುದರ ಮುಖಾಂತರ ತಮ್ಮ ಜೀವನದ ಧ್ಯೇಯವನ್ನಾಗಿ ಇಟ್ಟುಕೊಂಡು, ನಿರಂತರವಾಗಿ ಹೋರಾಟ ಮಾಡಿದರು. ಅದರ ಮುಖಾಂತರ ಸಂಘಟನೆಯ ಫಲವಾಗಿ ಶೋಷಣೆಗೊಳಪಟ್ಟ ವರ್ಗವು ಸಮಾಜದಲ್ಲಿ ಸ್ವಾಭಿಮಾನದಿಂದ ಬದುಕಲು ಪ್ರೇರಕರಾದವರು. ಹಾಗಾಗಿ ಬಾಬಾ ಸಾಹೇಬರ ಆದರ್ಶ ವ್ಯಕ್ತಿತ್ವ ಅನುಕರಣೀಯ.

**ಪರಾಮರ್ಶನ ಗ್ರಂಥಗಳು**


- ಅಂಬೇಡ್ಕರ್, ಬಿ.ಆರ್. (1916) ಕ್ಯಾಸ್ಟ್ಸ್ ಇನ್ ಇಂಡಿಯಾ: ದೇರ್ ಮೆಕಾನಿಸಮ್, ಜೆನೆಸಿಸ್ ಅಂಡ್ ಡೆವಲಪ್‌ಮೆಂಟ್, ಡಾ.ಬಾಬಾಸಾಹೇಬ್ ಅಂಬೇಡ್ಕರ್: ರೈಟಿಂಗ್ಸ್ ಅಂಡ್ ಸ್ಪೀಚಸ್, ಸಂ.1, ಎಜುಕೇಷನ್ ಡಿಪಾರ್ಟ್‌ಮೆಂಟ್, ಗೌರ್ನಮೆಂಟ್ ಆಫ್ ಮಹಾರಾಷ್ಟ್ರ, ಬಾಂಬೆ, ಪು.5–22.
- ಅಂಬೇಡ್ಕರ್, ಬಿ.ಆರ್. (1936) ಅನಿಹಿಲೇಶನ್ ಆಫ್ ಕ್ಯಾಸ್ಟ್, ಡಾ.ಬಾಬಾಸಾಹೇಬ್ ಅಂಬೇಡ್ಕರ್: ರೈಟಿಂಗ್ಸ್ ಅಂಡ್ ಸ್ಪೀಚಸ್, ಸಂ.1, ಎಜುಕೇಷನ್ ಡಿಪಾರ್ಟ್‌ಮೆಂಟ್, ಗೌರ್ನಮೆಂಟ್ ಆಫ್ ಮಹಾರಾಷ್ಟ್ರ, ಬಾಂಬೆ, ಪು.23–96.
- ಅಂಬೇಡ್ಕರ್ ಬರಹಗಳು ಮತ್ತು ಭಾಷಣಗಳು, ಸಂಪುಟ 1, ಶಿಕ್ಷಣ ಇಲಾಖೆ, ಮಹಾರಾಷ್ಟ್ರ ರಾಜ್ಯ ಸರ್ಕಾರ, ಮುಂಬೈ, ಪು.73.
- ಅಂಬೇಡ್ಕರ್, ಬಿ.ಆರ್. (1955) 'ಹಿಂದೂ ಕೋಡ್ ಬಿಲ್ ಮಸೂದೆಯನ್ನು ಪಾರ್ಲಿಮೆಂಟಿನಲ್ಲಿ ಮಂಡಿಸಿದ ಸಂದರ್ಭದಲ್ಲಿ ಮಾಡಿದ ಭಾಷಣ', ಡಾ.ಬಿ.ಆರ್.ಅಂಬೇಡ್ಕರ್‌ರವರ ಬರಹಗಳು ಮತ್ತು ಭಾಷಣಗಳು, ಸಂ.1–14, ಮಹಾರಾಷ್ಟ್ರ ಸರ್ಕಾರ, ಮುಂಬಯಿ, ಭಾರತ.

- ಬಾಟ್ಲಿವಾಲಾ, ಶ್ರೀಲತಾ (1994) ದ ಮೀನಿಂಗ್ ಆಫ್ ವಿಮೆನ್ಸ್ ಎಂಪವರ್‌ಮೆಂಟ್: ನ್ಯೂ ಕಾನ್ಸೆಪ್ಟ್ ಫ್ರಮ್ ಆಕ್ಷನ್, ಗೀತಾ ಸೇನ್, ಆಡ್ರಿಯೆನ್ನೆ ಜರ್ಮೈನ್ ಮತ್ತು ಲಿಂಕನ್ ಚೆನ್ (ಸಂ), ಪಾಪ್ಯುಲೇಶನ್ ಪಾಲಿಸಿಸ್ ರಿ ಕನ್ಸಿಡರ್ಡ್:ಹೆಲ್ತ್, ಎಂಪವರ್‌ಮೆಂಟ್ ಅಂಡ್ ರೈಟ್ಸ್, ಹಾರ್ವರ್ಡ್ ಸ್ಕೂಲ್ ಆಫ್ ಪಬ್ಲಿಕ್ ಹೆಲ್ತ್, ಬೋಸ್ಟನ್, ಯು.ಎಸ್.ಎ.

- ಮೊಗಳ್ಳಿ ಗಣೇಶ್. (2015). ಜಾತಿ ಮೀಮಾಂಸೆ. ಅಭಿನವ ಪ್ರಕಾಶನ, ಮೈಸೂರು. ಬೆಂಗಳೂರು.

- ನಂದನ ಜಿ.ಬಿ. (2006). ಡಾ. ಬಿ.ಆರ್. ಅಂಬೇಡ್ಕರ್ ಅಸ್ಪೃಶ್ಯತೆಯ ವಿಮೋಚನೆ, ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

- ಶೆಟ್ಟಿ, ರಾಜಶೇಖರ್ ವಿ.ಟಿ. (1987) ದಲಿತ್ ವಾಯ್ಸ್, ಬೆಂಗಳೂರು, ಜನವರಿ 16–31, ಪು.6.

- ಶಿವರಾಂ. ಎನ್.ಆರ್. (2014). ಅಂಬೇಡ್ಕರ್ ಥಾಟ್ಸ್. ಲಕ್ಷ್ಮಿ ಮುದ್ರಣಾಲಯ, ಬೆಂಗಳೂರು.


IIMRD JOURNALS